# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ,

6 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03

No.KSEAB/DPU/TS(OT)/1/2024/21916 Date:29.01.2024

## ದರಪಟ್ಟಿ ಆಹ್ವಾನ ಪತ್ರ

**ವಿಷಯ:** 2023ರ ವರ್ಷದಲ್ಲಿ ನಡೆದ ಪಿ.ಯು.ಸಿ ಪರೀಕ್ಷೆಯ ಉತ್ತೀರ್ಣ ಫಲಿತಾಂಶ ಪಟ್ಟಿಗಳನ್ನು ಸಂಪುಟ ಬೈಂಡಿಂಗ್ ಮಾಡುವ ಕಾರ್ಯಕ್ಕಾಗಿ ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸುವ ಬಗ್ಗೆ.

*****

2023ರ ವರ್ಷದಲ್ಲಿ ನಡೆದ ಪಿ.ಯು.ಸಿ ಮುಖ್ಯ ಹಾಗೂ ಪೂರಕ ಪರೀಕ್ಷೆ 1 & 2ರ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಉತ್ತೀರ್ಣ ಫಲಿತಾಂಶ ಪಟ್ಟಿಗಳ ಸಂಪುಟ ಬೈಂಡಿಂಗ್ ಮಾಡುವ ಕಾರ್ಯಕ್ಕಾಗಿ ಅರ್ಹ ಸಂಸ್ಥೆಗಳಿಂದ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು, ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

**ಷರತ್ತುಗಳು**

1.ಅನುಮೋದನೆಯಾದ ದರವು ಕರಾರು ಒಪ್ಪಂದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ.

2.ನಮೂದಿಸಿದ ಒಟ್ಟು ದರದಲ್ಲಿ ಅತಿ ಕಡಿಮೆ ದರ ನಮೂದಿಸಿದ ಸಂಸ್ಥೆಯನ್ನು ಸದರಿ ಕಾರ್ಯಕ್ಕೆ ಆಯ್ಕೆ ಮಾಡಲಾಗುವುದು.

3.ಬೈಂಡಿಂಗ್ ಕಾರ್ಯಕ್ಕೆ ದರ ನಮೂದಿಸುವಾಗ ಎಲ್ಲಾ ತೆರಿಗೆಗಳನ್ನು ಸೇರಿಸಿ ದರ ನಮೂದಿಸತಕ್ಕದ್ದು.

4.ದರಪಟ್ಟಿಯಲ್ಲಿ ನಮೂದಿಸಿರುವ ದರವೇ ಅಂತಿಮವಾಗಿದ್ದು, ನಂತರದಲ್ಲಿ ಹೆಚ್ಚುವರಿ ದರಕ್ಕೆ ಬಿಲ್ ಸಲ್ಲಿಸಲು ಅವಕಾಶವಿರುವುದಿಲ್ಲ.

5.ಮಂಡಲಿಯಲ್ಲಿ ಮುದ್ರಿತವಾದ ಉತ್ತೀರ್ಣ ಫಲಿತಾಂಶ ಪಟ್ಟಿಗಳನ್ನು ಬೈಂಡಿಂಗ್ ಮಾಡಲು ಫಲಿತಾಂಶ ಪಟ್ಟಿಗಳನ್ನು ಸ್ವೀಕರಿಸಿದ ದಿನಾಂಕದಿಂದ ರಜೆ ದಿನಗಳನ್ನು ಸೇರಿಸಿ 15 ದಿನಗಳ ಒಳಗಾಗಿ ಬೈಂಡಿಂಗ್ ಮಾಡಿ, ಮಂಡಲಿಗೆ ಹಿಂದಿರುಗಿಸಬೇಕು.

6.ಒಂದು ವೇಳೆ ಸಂಸ್ಥೆಯು ನಿಗಧಿತ ಅವಧಿಯಲ್ಲಿ ಬೈಂಡಿಂಗ್ ಕಾರ್ಯ ನಿರ್ವಹಿಸಲು ವಿಫಲವಾದಲ್ಲಿ ಮಂಡಲಿಯು ಮಾಡಿಕೊಳ್ಳುವ ಪ್ರತ್ಯೇಕ ವ್ಯವಸ್ಥೆಯಿಂದ ಮಂಡಳಿಗೆ ಉಂಟಾಗುವ ನಷ್ಟವನ್ನು ಮಂಡಲಿಯು ನಿಗಧಿಪಡಿಸುವ ದಂಡದೊಂದಿಗೆ ಪಾವತಿಸಲು ಸಂಸ್ಥೆಯು ಬದ್ಧವಾಗಿರಬೇಕು. ಇಲ್ಲವಾದಲ್ಲಿ ಸದರಿ ಮೊತ್ತವನ್ನು ಮಂಡಲಿಯು ಮುಂದೆ ಪಾವತಿಸಲಾಗುವ ಬಿಲ್‌ನಲ್ಲಿ ಅಥವಾ ಸಾಧನಾ ಠೇವಣಿಯಲ್ಲಿ ಕಟಾಯಿಸಲಾಗುವುದು.

7.ಸದರಿ ಕಾರ್ಯಕ್ಕೆ ಮಂಡಲಿಯಿಂದ ಯಾವುದೇ ತೆರವಾದ ಸಾಗಾಣಿಕೆ ವೆಚ್ಚ ಹಾಗೂ ಇತರೆ ಭತ್ಯೆಯನ್ನು ನೀಡಲಾಗುವುದಿಲ್ಲ.

8.ಬೈಂಡಿಂಗ್‌ಗೆ ಸಂಬಂಧಿಸಿದಂತೆ ಮಂಡಲಿಯು ಯಾವುದೇ ತೆರವಾದ ಸಾಮಗ್ರಿ ಸರಬರಾಜು ಮಾಡುವುದಿಲ್ಲ ಹಾಗೂ ವೇಸ್ಟೇಜ್‌ಗೆ ಸಂಬಂಧಿಸಿದಂತೆ ಯಾವುದೇ ವೆಚ್ಚ ಭರಿಸುವುದಿಲ್ಲ.

9.ಬೈಂಡಿಂಗ್ ಮಾಡಬೇಕಾದ ಉತ್ತೀರ್ಣ ಸಂಪುಟದ ಅಳತೆ ಹಾಗೂ ಬೈಂಡಿಂಗ್‌ಗೆ ಬಳಸಬೇಕಾದ ಸಾಮಗ್ರಿಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

10.ಸದರಿ ಕಾರ್ಯಕ್ಕೆ ಮಂಡಲಿಯು ಯಾವುದೇ ಮುಂಗಡ ಹಣ ನೀಡುವುದಿಲ್ಲ. ಬಿಲ್ ಪಾವತಿಯಲ್ಲಿ ನಿಯಮಾನುಸಾರ ಆದಾಯ ತೆರಿಗೆ ಮತ್ತು ಜಿ.ಎಸ್.ಟಿ ತೆರಿಗೆಯನ್ನು ಕಟಾಯಿಸಲಾಗುವುದು.

11. ಸರ್ಕಾರಿ ಆದೇಶ ಸಂಖ್ಯೆ: SWD 34BCA 2004 ಬೆಂಗಳೂರು ದಿನಾಂಕ:10.03.2005 ರಲ್ಲಿ ನಮೂದಿಸಲಾದ ಮೀಸಲಾತಿ ವರ್ಗ ಅನುಪಾತವು ಕೆಳಕಂಡಂತಿದೆ.

1. ಪರಿಶಿಷ್ಟ ಜಾತಿ(ಎಸ್.ಸಿ)-20%
2. ಪರಿಶಿಷ್ಟ ಪಂಗಡ (ಎಸ್.ಟಿ)-05%
3. ಹಿಂದುಳಿದ ವರ್ಗ-20%
4. ಅಲ್ಪಸಂಖ್ಯಾತರು-05%

ಮೇಲೆ ತಿಳಿಸಿದ ಮೀಸಲಾತಿಗಳ ಅನುಷ್ಠಾನವು ಅದೇ ಸರ್ಕಾರಿ ಆದೇಶದಲ್ಲಿ ಉಲ್ಲೇಖಿಸಲಾದ ಎಲ್ಲಾ ಸೂಚನೆಗಳು/ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಮು.ತಿ.ನೋ.

ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಕೊಟೇಷನ್ ಸಲ್ಲಿಸಲು ಇಚ್ಛಿಸುವವರು ದಿನಾಂಕ:05.02.2024 ರೊಳಗೆ ಸೀಲು ಮಾಡಿದ ಲಕೋಟೆಯಲ್ಲಿ ನಿರ್ದೇಶಕರು, ಪಿ.ಯು ಪರೀಕ್ಷೆಗಳು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು, ಇವರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಹಾಗೂ ಲಕೋಟೆಯ ಮೇಲೆ "ಪಿ.ಯು.ಸಿ ಪರೀಕ್ಷೆಯ ಉತ್ತೀರ್ಣ ಫಲಿತಾಂಶ ಪಟ್ಟಿಗಳ ಬೈಂಡಿಂಗ್ ಕಾರ್ಯಕ್ಕೆ ದರಪಟ್ಟಿ ಸಲ್ಲಿಸುವ ಕುರಿತು." ಎಂದು ನಮೂದಿಸುವುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ "ಬಿ" ಶಾಖೆಯಿಂದ ಪಡೆಯಬಹುದಾಗಿದೆ.

29/1/2024

ನಿರ್ದೇಶಕರು, ಪಿ.ಯು ಪರೀಕ್ಷೆಗಳು

ಪ್ರತಿಗಳು

1.ಮಂಡಳಿಯ ಸೂಚನಾ ಫಲಕಕ್ಕೆ

2.ಕಛೇರಿ ಪ್ರತಿ

## :ಅನುಬಂಧ:

<u>ಪಿ.ಯು.ಸಿ ಉತ್ತೀರ್ಣ ಫಲಿತಾಂಶ ಫಲಿತಾಂಶ ಪಟ್ಟಿಗಳನ್ನು ಬೈಂಡಿಂಗ್ ಮಾಡಿಸುವ ಸಂಬಂಧ ಆಹ್ವಾನಿಸಲಾದ ದರಪಟ್ಟಿ</u>

| Sl. No | Details of Volume | Unit cost per Volume in Rs. Including G.S.T., | Unit cost per Volume in words Including G.S.T., |
|---|---|---|---|
| 1. | **A3 Copier Paper**<br>**Size -** "16.5 x12"<br>**Material-** Binding Leather & Calico 40 ounces Straw-board<br>**No of Pages Per Volume** – 20 To 225<br>**Binding details –40** ounces Straw-board of"16.5 x12" With calico& leather bind to spine that runs up to 2" inches on both front & back board Also leather bind to four corners that runs up to 2" inches on the front & black board | | |

ನಿರ್ದೇಶಕರು,(ಪಿ.ಯು ಪರೀಕ್ಷೆಗಳು) 29/1/2024